ನಿಮ್ಮ ವಿಮಾ ಕಂಪೆನಿಯು ನಿಮ್ಮ ದೂರುಗಳಿಗೆ ಕಿವಿಗೋಡುತ್ತಿದೆಯೇ ?

ನಿಮ್ಮ ವಿಮಾ ಕಂಪೆನಿಯು ನಿಮ್ಮ ದೂರುಗಳನ್ನು
ನಿವಾರಿಸದಿದ್ದರೆ ದಯವಿಟ್ಟು ಸಂಪರ್ಕಿಸಿರಿ.

ಐಆರ್‌ಡಿಎ ಗ್ರಿವೆನ್ಸ್ ಕಾಲ್ ಸೆಂಟರ್
ನಿ:ಶುಲ್ಕ ನಂ : 155 255

ನಿಮ್ಮ ದೂರನ್ನು ನೋಂದಾಯಿಸಿ ಕೊಳ್ಳಲು ಮತ್ತು ಅದರ ತಾಜಾ ಸ್ಥಿತಿಯನ್ನು
ತಿಳಿದುಕೊಳ್ಳಲು ನೀವು ಇಲ್ಲಿ ನಮಗೆ ಇಮ್ಮೈಲ್ www.igms.irda.gov.in ಮಾಡಬಹುದು.

A public awareness initiative by
ಇವರಿಂದ ಒಂದು ಸಾರ್ವಜನಿಕ ಜಾಗೃತಿ ಉಪಕ್ರಮ
INSURANCE REGULATORY AND DEVELOPMENT AUTHORITY
Promoting Insurance. Protecting Insured.
www.irda.gov.in

INSURANCE REGULATORY AND DEVELOPMENT AUTHORITY
ಇವರಿಂದ ಒಂದು ಸಾರ್ವಜನಿಕ ಜಾಗೃತಿ ಉಪಕ್ರಮ

Bima Bemisaal

ಸ್ವಾಸ್ಥ್ಯ ವಿಮೆಯ ಬಗ್ಗೆ ಕೈಪಿಡಿ

ಅನುಕ್ರಮಣಿಕೆಗಳು :

1. ಈ ಕೈಪಿಡಿಯ ಬಗ್ಗೆ	1
2. ಸ್ವಾಸ್ಥ್ಯ ವಿಮೆ	2
3. ಆಗಾಗ ಕೇಳಲಾಗುವ ಪ್ರಶ್ನೆಗಳು	6
4. ಪಾಲಿಸಿಧಾರಕರ ಸೇವೆ ಸರ್ವಿಸಿಂಗ್ ಚಟುವಟಿಗಳು	14
5. ನಿಮ್ಮಲ್ಲಿ ದೂರುಗಳಿದ್ದರೆ	15

1. ಈ ಕೈಪಿಡಿಯ ಬಗ್ಗೆ

ಈ ಕೈಪಿಡಿಯನ್ನು ಸ್ವಾಸ್ಥ್ಯವಿಮೆಯ ಬಗ್ಗೆ ಮಾರ್ಗದರ್ಶಕವಾಗಿ ಇನ್‌ಶೂರೆನ್ಸ್ ರೆಗ್ಯುಲೇಟರಿ ಆಂಡ್ ಡೆವಲಪ್‌ಮೆಂಟ್ ಅಥಾರಿಟಿ (ಐಆರ್‌ಡಿಎ) ಇವರಿಂದ ವಿನ್ಯಾಸಗೊಳಿಸಲಾಗಿದೆ ಮತ್ತು ಕೇವಲ ಸಾಮಾನ್ಯ ಮಾಹಿತಿಯನ್ನು ಮಾತ್ರ ನೀಡುತ್ತದೆ. ಇಲ್ಲಿ ನೀಡಲಾದ ಯಾವುದೇ ಮಾಹಿತಿಯು ವಿಮಾ ಪಾಲಿಸಿಯ ನಿಯಮ ಮತ್ತು ನಿಬಂಧನೆಗಳನ್ನು ಬದಲಾಯಿಸುವುದಿಲ್ಲ ಅಥವಾ ರದ್ದುಗೊಳಿಸುವುದಿಲ್ಲ.

ಪಾಲಿಸಿಯ ಬಗ್ಗೆ ನಿರ್ದಿಷ್ಟವಾದ ಮಾಹಿತಿ ಅಥವಾ ಇತರ ಯಾವುದೇ ಹೆಚ್ಚುವರಿ ಮಾಹಿತಿಗಾಗಿ ದಯವಿಟ್ಟು ಲೈಸನ್ಸ್ ಹೊಂದಿರುವ ಏಜೆಂಟರನ್ನಾಗಲೀ ಅಥವಾ ಬ್ರೋಕರರನ್ನಾಗಲ್ಲಿ ಅಥವಾ ಐಆರ್‌ಡಿಎಯಿಂದ ನೋಂದಾಯಿಸಲ್ಪಟ್ಟ ವಿಮಾ ಕಂಪೆನಿಯನ್ನಾಗಲೀ ಸಂಪರ್ಕಿಸಿರಿ.

2. ಸ್ವಾಸ್ಥ್ಯ ವಿಮೆ

"**ಸ್ವಾಸ್ಥ್ಯ ವಿಮೆ**" ಎಂಬ ಪದವು ಮುಖ್ಯತ: ನಿಮ್ಮ ವೈದ್ಯಕೀಯ ವೆಚ್ಚಗಳಗಳನ್ನು ಒಳಗೊಂಡಿರುವ ವಿಮೆಯ ಪ್ರಕಾರಕ್ಕೆ ಸಂಬಂಧಿಸಿದೆ. ಸ್ವಾಸ್ಥ್ಯ ವಿಮೆಯು ಇತರ ಪಾಲಿಸಿಗಳಂತೆ ಇನ್‌ಶೂರರು ಮತ್ತು ಓರ್ವ ವ್ಯಕ್ತಿ ಸಮೂಹದ ನಡುವಿನ ಒಂದು ಒಪ್ಪಂದವಾಗಿದ್ದು ಇದರಲ್ಲಿ ಇನ್‌ಶೂರರು ಪಾಲಿಸಿಯಲ್ಲಿ ನಿರ್ದಿಷ್ಟ ಪಡಿಸಿರುವ ನಿಯಮ ಮತ್ತು ನಿಬಂಧನೆಗಳಿಗೊಳಪಟ್ಟು ಒಂದು ನಿರ್ದಿಷ್ಟ "ಪ್ರಿಮಿಯಂ" ನಲ್ಲಿ ನಿರ್ದಿಷ್ಟಪಡಿಸಲಾದ ಸ್ವಾಸ್ಥ್ಯ ವಿಮಾ ಸುರಕ್ಷೆಯನ್ನು ಒದಗಿಸಲು ಒಪ್ಪಿಕೊಳ್ಳುತ್ತಾರೆ.

- **ಸ್ವಾಸ್ಥ್ಯ ವಿಮಾ ಪಾಲಿಸಿಯು ಸಾಮಾನ್ಯವಾಗಿ ಯಾವುದನ್ನು ಒಳಗೊಂಡಿರುತ್ತದೆ**

  ಒಂದು ಸ್ವಾಸ್ಥ್ಯ ವಿಮಾ ಪಾಲಿಸಿಯು ವಿಮೆ ಮಾಡಿಕೊಂಡಿರುವ ಒಟ್ಟು ಮೊತ್ತಕ್ಕೆ ಒಳಪಟ್ಟು (ಒಂದು ಪಾಲಿಸಿಯ ಕಾಲಾವಧಿಯಲ್ಲಿನ ಎಲ್ಲಾ ದಾವೆಗಳಿಗೆ) ಈ ಕೆಳಗಿನ ಶೀರ್ಷಿಕೆಗಳಡಿಯಲ್ಲಿ ಮಾಡಲಾದ ವಿಮೆ ಮಾಡಿಸಿಕೊಂಡಿರುವ ಪ್ರತಿಯೊಬ್ಬ ವ್ಯಕ್ತಿಗೂ ಸಕಾರಣವಾದ ಮತ್ತು ಆವಶ್ಯಕವಾದ ವೆಚ್ಚಗಳನ್ನು ಒಳಗೊಂಡಿರುತ್ತದೆ.

  ಅ) ಕೋಣೆ, ಊಟದ ವೆಚ್ಚಗಳು

  ಆ) ನರ್ಸಿಂಗ್ ವೆಚ್ಚಗಳು

  ಇ) ಸರ್ಜನರು, ಅನೆಸ್ಥೆಟಿಸ್ಟರು, ಡಾಕ್ಟರರು, ಸಲಹೆಗಾರರು, ವಿಶೇಷಜ್ಞರ ಶುಲ್ಕಗಳು

  ಈ) ಅನೆಸ್ಥೇಸಿಯಾ, ರಕ್ತ, ಆಕ್ಸಿಜನ್, ಆಪರೇಶನ್ ಥಿಯೇಟರ್ ಶುಲ್ಕಗಳು, ಸರ್ಜಿಕಲ್ ಉಪಕರಣಗಳು, ಔಷಧಗಳು, ಡ್ರಗ್‌ಗಳು, ಡಯಾಗ್ನಾಸ್ಟಿಕ್ ಸಾಮಾಗ್ರಿಗಳು, ಎಕ್ಸ್-ರೇ, ಡಯಾಲಿಸಿಸ್, ಕೆಮೊಥೆರಪಿ, ರೇಡಿಯೊ ಥೆರಪಿ, ಪೇಸ್ ಮೇಕರ್‌ನ ವೆಚ್ಚ, ಕೃತಕ ಕೈಕಾಲುಗಳು, ಅವಯವದ ವೆಚ್ಚ ಮತ್ತು ಇಂತಹ ವೆಚ್ಚಗಳು.

- **ವಿಮಾ ಮೊತ್ತ**

  ನೀಡಲಾಗುವ ವಿಮಾ ಮೊತ್ತವು ವ್ಯಕ್ತಿಗತ ಆಧಾರದಲ್ಲಿರಬಹುದು ಅಥವಾ ಇಡೀ ಕುಟುಂಬಕ್ಕೆ ಫ್ಲೋಟರ್ ಆಧಾರದಲ್ಲಿರಬಹುದು.

- **ಕ್ಯುಮುಲೇಟಿವ್ ಬೋನಸ್ (ಸಿಬಿ)**

  ಸ್ವಾಸ್ಥ್ಯ ವಿಮಾ ಪಾಲಿಸಿಗಳು ಕ್ಯುಮುಲೇಟಿವ್ ಬೋನಸ್‌ಗಳನ್ನು ನೀಡುತ್ತಿರಬಹುದಾಗಿದ್ದು, ಇದರಲ್ಲಿ ಪ್ರತಿಯೊಂದು ದಾವೆ ಮುಕ್ತ ವರ್ಷಕ್ಕಾಗಿ, ಗರಿಷ್ಠ ಶೇಕಡಾವಾರಿಗೆ ಒಳಪಟ್ಟು (ಸಾಮಾನ್ಯವಾಗಿ 50%) ವಿಮಾ ಮೊತ್ತವನ್ನು ನವೀಕರಣದ ಸಮಯದಲ್ಲಿ ನಿರ್ದಿಷ್ಟ ಪ್ರತಿಶತದಂತೆ ಹೆಚ್ಚಿಸಲಾಗುತ್ತದೆ. ದಾವೆ ಉಂಟಾದಲ್ಲಿ, ಮುಂದಿನ ನವೀಕರಣದಲ್ಲಿ ಸಿಬಿಯನ್ನು 10% ಕಡಿಮೆ ಮಾಡಲಾಗುತ್ತದೆ.

- **ಸ್ವಾಸ್ಥ್ಯ ತಪಾಸಣೆಯ ವೆಚ್ಚ**

  ಸ್ವಾಸ್ಥ್ಯ ವಿಮಾ ಪಾಲಿಸಿಗಳು ಸ್ವಾಸ್ಥ್ಯ ತಪಾಸಣೆಯ ವೆಚ್ಚಗಳ ಮರುಪಾವತಿಯ ಪ್ರಾವಧಾನಗಳನ್ನು ಕೂಡಾ ಒಳಗೊಂಡಿರಬಹುದು. ಏನನ್ನು ಅನುವು ಮಾಡಲಾಗಿದೆ ಎಂದು ತಿಳಿಯಲು ನಿಮ್ಮ ಪಾಲಿಸಿಯನ್ನು ಎಚ್ಚರಿಕೆಯಿಂದ ಓದಿರಿ.

- **ಆಸ್ಪತ್ರೆಯಲ್ಲಿರುವ ಕನಿಷ್ಠ ಅವಧಿ**

  ಪಾಲಿಸಿಯಡಿಯಲ್ಲಿ ದಾವೆಯನ್ನು ಸಲ್ಲಿಸುವುದಕ್ಕೆ ಅರ್ಹರಾಗಲು, ಆಸ್ಪತ್ರೆಯಲ್ಲಿ ನಿರ್ದಿಷ್ಟ ತಾಸುಗಳ ಕನಿಷ್ಠ ಅವಧಿಯ ತನಕ ಇರುವುದು ಆವಶ್ಯಕವಾಗಿದೆ. ಇದು ಸಾಮಾನ್ಯವಾಗಿ 24 ತಾಸುಗಳಾಗಿವೆ. ಅಪಘಾತದಿಂದಾದ ಆರೋಗ್ಯ ಹಾನಿಗಳ ಚಿಕಿತ್ಸೆ ಮತ್ತು ಕೆಲವು ನಿರ್ದಿಷ್ಟ ಪಡಿಸಲಾದ ಚಿಕಿತ್ಸೆಗಳಿಗಾಗಿ ಈ ಮಿತಿ ಅನ್ವಯಿಸದೆ ಇರಬಹುದು. ವಿವರಗಳನ್ನು ತಿಳಿದುಕೊಳ್ಳಲು ಪಾಲಿಸಿಯ ಪ್ರಾವಧಾನಗಳನ್ನು ಓದಿರಿ.

- **ಆಸ್ಪತ್ರೆಗೆ ಸೇರಿಸುವ ಮೊದಲು ಮತ್ತು ನಂತರದ ವೆಚ್ಚಗಳು**

  ವೆಚ್ಚಗಳು ಕಾಯಿಲೆ/ಅಸೌಖ್ಯತೆಗೆ ಸಂಬಂಧಿಸಿದ್ದರೆ ಆಸ್ಪತ್ರೆಗೆ ಸೇರಿಸಲ್ಪಡುವ ನಿರ್ದಿಷ್ಟವಾದ ಸಂಖ್ಯೆಯ ದಿನಗಳ ಮೊದಲು ಮತ್ತು ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ ನಿರ್ದಿಷ್ಟ ಅವಧಿಯಲ್ಲಿ ಮಾಡಲಾದ ವೆಚ್ಚಗಳನ್ನು ದಾವೆಯ ಭಾಗವಾಗಿ ಪರಿಗಣಿಸಬಹುದು. ಈ ವಿವರಗಳನ್ನು ತಿಳಿದುಕೊಳ್ಳಲು ಪಾಲಿಸಿ ಪ್ರಾವಧಾನಗಳನ್ನು ಓದಿರಿ

- **ನಗದು ರಹಿತ ಸೌಲಭ್ಯ**

  ವಿಮಾ ಕಂಪೆನಿಗಳು ದೇಶದಲ್ಲಿನ ಆಸ್ಪತ್ರೆಗಳ ಜಾಲದೊಂದಿಗೆ ಟೈ-ಅಪ್ ವ್ಯವಸ್ಥೆಗಳನ್ನು ಹೊಂದಿದೆ. ಪಾಲಿಸಿ ಧಾರಕರು ಯಾವುದೇ ನೆಟ್‌ವರ್ಕ್

ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆದರೆ ವಿಮೆ ಮಾಡಿಸಿಕೊಂಡಿರುವ ವ್ಯಕ್ತಿ ಆಸ್ಪತ್ರೆಯ ಬಿಲ್‌ಗಳನ್ನು ಪಾವತಿಸುವ ಆವಶ್ಯಕತೆ ಇಲ್ಲ. ವಿಮಾ ಕಂಪೆನಿಯು ತನ್ನ ಮೂರನೇ ಪಾರ್ಟಿ ಅಡ್ಮಿನಿಸ್ಟ್ರೇಟರರ (ಟಿಪಿಎ) ಮೂಲಕ ಆಸ್ಪತ್ರೆಗೆ ನೇರ ಹಣಪಾವತಿಯ ವ್ಯವಸ್ಥೆ ಮಾಡುತ್ತದೆ. ಪಾಲಿಸಿಯಲ್ಲಿ ನಿರ್ದಿಷ್ಟಪಡಿಸಿದ ಉಪ ಮಿತಿಯ ಮೇಲಿನ ಅಥವಾ ಪಾಲಿಸಿಯಡಿಯಲ್ಲಿ ಒಳಗೊಂಡಿರದ ಸಂಗತಿಗಳ ಆಸ್ಪತ್ರೆಯ ವೆಚ್ಚಗಳನ್ನು ವಿಮೆ ಮಾಡಿಸಿಕೊಂಡವರು ನೇರವಾಗಿ ಆಸ್ಪತ್ರೆಯೊಂದಿಗೆ ತೀರಿಸಿಕೊಳ್ಳ ಬೇಕು. ವಿಮೆ ಮಾಡಿಸಿ ಕೊಂಡವರು ಪಟ್ಟಿ ಮಾಡದೆ ಇರುವಂಥಾ ಆಸ್ಪತ್ರೆಯಲ್ಲಿಯೂ ಚಿಕಿತ್ಸೆ ಪಡೆಯಬಹುದಾಗಿದ್ದು ಇಂತಹ ಸಂದರ್ಭದಲ್ಲಿ ಅವರು ಮೊದಲಿಗೆ ಬಿಲ್ ಪಾವತಿಯನ್ನು ಮಾಡಬೇಕು ಮತ್ತು ನಂತರ ವಿಮಾ ಕಂಪೆನಿಯಿಂದ ಮರುಪಾವತಿಯನ್ನು ಪಡೆಯಬೇಕು. ಇಲ್ಲಿ ನಗದು ರಹಿತ ಸೌಲಭ್ಯ ಅನ್ವಯಿಸುವುದಿಲ್ಲ.

- **ಹೆಚ್ಚುವರಿ ಪ್ರಯೋಜನಗಳು ಮತ್ತು ಇತರ ಪ್ರತ್ಯೇಕ ಪಾಲಿಸಿಗಳು**

ವಿಮಾ ಕಂಪೆನಿಗಳು ''ಆ್ಯಡ್ - ಆನ್‌ಗಳು'' ಅಥವಾ ರೈಡರ್‌ಗಳ ರೂಪದಲ್ಲಿ ವಿಭಿನ್ನ ಇತರ ಪ್ರಯೋಜನಗಳನ್ನು ನೀಡುತ್ತಿವೆ. ಅಲ್ಲದೆ ''ಆಸ್ಪತ್ರೆ ನಗದು'', ''ಕ್ರಿಟಿಕಲ್ ಇಲ್‌ನೆಸ್ ಲಾಭ'' ''ಸರ್ಜಿಕಲ್ ವೆಚ್ಚ ಲಾಭ'' ಇತ್ಯಾದಿ ಲಾಭಗಳನ್ನು ನೀಡುವಂತೆ ವಿನ್ಯಾಸಗೊಳಿಸಲಾದ ಪ್ರತ್ಯೇಕ ಪಾಲಿಸಿಗಳೂ ಇವೆ. ಇದನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳಬಹುದು ಅಥವಾ ಆಸ್ಪತ್ರೆ ದಾಖಲಿಕೆ ಪಾಲಿಸಿಗೆ ಹೆಚ್ಚುವರಿಯಾಗಿ ತೆಗೆದು ಕೊಳ್ಳಬಹುದು.

ಕೆಲವು ಕಂಪೆನಿಗಳು ಮೂಲ ಸ್ವಾಸ್ಥ್ಯ ಪಾಲಿಸಿಯಲ್ಲಿ ಲಭ್ಯವಿರುವ ಮಿತಿಗೆ ಹೆಚ್ಚುವರಿಯಾಗಿ ವಾಸ್ತವಿಕ ವೆಚ್ಚವನ್ನು ಒಳಪಡಿಸಲು ಟಾಪ್ ಅಪ್ ಪಾಲಿಸಿಗಳಂತಹ ಸ್ವರೂಪದ ಉತ್ಪನ್ನವನ್ನು ತಂದಿವೆ.

- **ಹೊರತು ಪಡಿಸುವಿಕೆಗಳು**

ಈ ಕೆಳಗಿನವುಗಳನ್ನು ಸಾಮಾನ್ಯವಾಗಿ ಸ್ವಾಸ್ಥ್ಯ ಪಾಲಿಸಿಗಳಿಂದ ಹೊರತು ಪಡಿಸಲಾಗುತ್ತದೆ:

ಅ) ಮೊದಲೇ ಇರುವಂಥಾ ಎಲ್ಲಾ ಕಾಯಿಲೆಗಳು (ಮೊದಲೇ ಇರುವಂಥಾ ಕಾಯಿಲೆಗಳನ್ನು ಎಲ್ಲಾ ನಾನ್ ಲೈಫ್ ಮತ್ತು ಸ್ವಾಸ್ಥ್ಯ ಕಂಪೆನಿಗಳು ಏಕರೂಪದಲ್ಲಿ ವ್ಯಾಖ್ಯಾನಿಸಿದೆ)

ಆ) ಮೊದಲ ವರ್ಷದ ಪಾಲಿಸಿಯಡಿಯಲ್ಲಿ ಅಸೌಖ್ಯತೇ ಕಾಯಿಲೆಗಾಗಿ ಸುರಕ್ಷೆಯ ತಾರೀಖಿನಿಂದ ಮೊದಲ 30 ದಿನಗಳ ಯಾವುದೇ ದಾವೆ. ಇದು ಅಪಘಾತ ಆರೋಗ್ಯ ಹಾನಿ ದಾವೆಗಳಿಗೆ ಅನ್ವಯಿಸುವುದಿಲ್ಲ.

ಇ) ಮೊದಲನೆಯ ವರ್ಷದ ಸುರಕ್ಷೆಯಲ್ಲಿ ಕ್ಯಾಟರ್ಯಾಕ್ಟ್ ಬೆನ್ಯಾನ್ ಪ್ರೋಸ್ಟೇಟಿಕ್ ಹೈಪರ್‌ಟ್ರೋಫಿ, ಮೆನೊರ್‌ಜಿಯಾ ಅಥವಾ ಫಿಭ್ರೊ ವ್ಮೈಯೋಮಾಕ್ಕಾಗಿ ಹೈಸರೆಕ್ಟೊಮಿ, ಹರ್ನಿಯಾ ಹೈಡ್ರೊಸೆಲ್‌ಂ ಕಂಜೆನಿಟಲ್ ಇಂಟರ್‌ನಲ್ ಕಾಯಿಲೆ, ಗುದದ್ವಾರದಲ್ಲಿ ಫಿಸ್ತುಲಾ, ಪೈಲ್ಸ್ ಸೈನುಸಿಟಿಸ್ ಸಂಬಂಧಿತ ಅಸ್ವಸ್ಥತೆಗಳು.

ಈ) ಕಾಯಿಲೆಯ ಚಿಕಿತ್ಸೆಗಲ್ಲದಿದ್ದರೆ ಸರ್ಕಮ್‌ಸಿಷನ್

ಉ) ಕನ್ನಡಕ, ಕಾಂಟ್ಯಾಕ್ಟ್ ಲೆನ್ಸ್, ಶ್ರವಣ ಸಾಧನಗಳ ವೆಚ್ಚ

ಊ) ಹಲ್ಲಿನ ಚಿಕಿತ್ಸೆ/ ಆಸ್ಪತ್ರೆಗೆ ಸೇರಿಸಲ್ಪಡುವ ಆವಶ್ಯಕತೆ ಇಲ್ಲದಿದ್ದರೆ ಶಸ್ತ್ರಚಿಕಿತ್ಸೆ

ಋ) ಕನ್ವಲೆಲೆಸೆನ್ಸ್, ಜನರಲ್ ಡೆಬಿಲಿಟಿ, ಕಂಜೆನಿಟಲ್ ಎಕ್ಸ್‌ಟರ್ನಲ್ ಡಿಫೆಕ್ಟ್ಸ್, ವಿ. ಡಿ. ಸ್ವತ: ಮಾಡಿಕೊಂಡ ಗಾಯ, ಅಮಲು ಬರಿಸುವ ದ್ರವ್ಯಗಳ ಉಪಯೋಗ, ಆಲ್ಕೋಹಾಲ್, ಏಡ್ಸ್, ರೋಗ ನಿದಾನದ ವೆಚ್ಚಗಳು ಆಸ್ಪತ್ರೆಗೆ ಸೇರಿಸುವಿಕೆಯ ಆವಶ್ಯಕತೆಗೆ ಬೇಕಾಗಿರದ ಎಕ್ಸ್-ರೇ ಅಥವಾ ಪ್ರಯೋಗಶಾಲಾ ಪರೀಕ್ಷಣೆಗಳು.

ಎ) ಸಿಸೇರಿಯನ್ ಸೆಕ್ಷನನ್ನೊಳಗೊಂಡು ಗರ್ಭಧಾರಣೆ ಅಥವಾ ಶಿಶು ಜನನಕ್ಕೆ ಸಂಬಂಧಿಸಿದ ಚಿಕಿತ್ಸೆ.

ಏ) ನ್ಯಾಚುರೊಪಥಿ ಚಿಕಿತ್ಸೆ

ವಾಸ್ತವಿಕ ಹೊರತು ಪಡಿಸುವಿಕೆಯಲ್ಲಿ ಉತ್ಪನ್ನದಿಂದ ಉತ್ಪನ್ನಕ್ಕೆ ಮತ್ತು ಕಂಪೆನಿಯಿಂದ ಕಂಪೆನಿಗೆ ವ್ಯತ್ಯಾಸವಾಗಬಹುದು. ಗುಂಪು ಪಾಲಿಸಿಗಳಲ್ಲಿ, ಹೆಚ್ಚುವರಿ ಪ್ರೀಮಿಯಂ ಸಂದಾಯ ಮಾಡಿದಲ್ಲಿ ಹೊರತುಪಡಿಸುವಿಕೆಗಳನ್ನು ರದ್ದುಗೊಳಿಸುವುದು ತೆಗೆದುಃ ಹಾಕುವುದು ಸಾಧ್ಯವಾಗಬಹುದು.

- **ಕಡಿಮೆ ಅವಧಿಯ ಪಾಲಿಸಿಗಳಿಲ್ಲ.**

ಸ್ವಾಸ್ಥ್ಯ ವಿಮಾ ಪಾಲಿಸಿಗಳನ್ನು ಒಂದು ವರ್ಷಕ್ಕಿಂತ ಕಡಿಮೆ ಅವಧಿಗಾಗಿ ನೀಡಲಾಗುವುದಿಲ್ಲ.

3. ಸ್ವಾಸ್ಥ್ಯ ವಿಮೆಯ ಬಗ್ಗೆ ಆಗಾಗ ಕೇಳಲಾಗುವ ಪ್ರಶ್ನೆಗಳು

ಸ್ವಾಸ್ಥ್ಯ ವಿಮೆ ಎಂದರೇನು?

ಸ್ವಾಸ್ಥ್ಯ ವಿಮೆಯು ನಿಮ್ಮ ವೈದ್ಯಕೀಯ ವೆಚ್ಚಗಳನ್ನು ಒಳಪಡಿಸುವ ಒಂದು ಪ್ರಕಾರದ ವಿಮೆಯಾಗಿದೆ. ಸ್ವಾಸ್ಥ್ಯ ವಿಮಾ ಪಾಲಿಸಿಯು ಇನ್‌ಶೂರರು ಮತ್ತು ಓರ್ವ ವ್ಯಕ್ತಿ/ಗುಂಪಿನ ನಡುವಿನ ಒಂದು ಒಪ್ಪಂದವಾಗಿದ್ದು ಇದರಲ್ಲಿ ಇನ್‌ಶೂರರು ಒಂದು ನಿರ್ದಿಷ್ಠ ''ಪ್ರೀಮಿಯಂ''ನಲ್ಲಿ ನಿರ್ದಿಷ್ಟ ಪಡಿಸಲಾದ ಸ್ವಾಸ್ಥ್ಯ ವಿಮಾ ಸುರಕ್ಷೆಯನ್ನು ಒದಗಿಸಲು ಒಪ್ಪಿಕೋಳ್ಳುತ್ತಾರೆ.

ಯಾವ ಪ್ರಕಾರಗಳ ಸ್ವಾಸ್ಥ್ಯ ವಿಮೆ ಲಭ್ಯವಿದೆ?

ವಿಮೆ ಮಾಡಿಸಿಕೊಂಡವರ ಆವಶ್ಯಕತೆ ಮತ್ತು ಆಯ್ಕೆಯನ್ನು ಅವಲಂಬಿಸಿ ಅನೇಕ ಶ್ರೇಣಿಯ ಸ್ವಾಸ್ಥ್ಯ ಸುರಕ್ಷೆಯು ಈಗ ಉಪಲಬ್ಧವಿದ್ದರೂ, ಭಾರತದಲ್ಲಿನ ಅತಿಸಾ ಮಾನ್ಯವಾದ ವಿಮಾ ಪಾಲಿಸಿಯು ಆಸ್ಪತ್ರೆಗೆ ದಾಖಲಾಗಿರುವಾಗ ಮಾಡಿದ ವೆಚ್ಚಗಳನ್ನು ಒಳಗೊಂಡಿರುತ್ತವೆ. ಸ್ವಾಸ್ಥ್ಯ ಇನ್‌ಶೂರರು ಸಾಮಾನ್ಯವಾಗಿ ಒಂದೋ ಆಸ್ಪತ್ರೆಗೆ ನೇರವಾಗಿ ಹಣ ಪಾವತಿಸುತ್ತಾರೆ (ನಗದು ರಹಿತ ಸೌಲಭ್ಯ) ಅಥವಾ ಕಾಯಿಲೆ ಅಥವಾ ಆರೋಗ್ಯ ಹಾನಿಗೆ ಸಂಬಂಧಿಸಿದ ವೆಚ್ಚಗಳನ್ನು ಮರುಪಾವತಿ ಮಾಡುತ್ತಾರೆ. ಅಥವಾ ಕಾಯಿಲೆ ಉಂಟಾದಾಗ ಒಂದು ನಿಗದಿತ ಲಾಭವನ್ನು ವಿತರಿಸುತ್ತಾರೆ ಸ್ವಾಸ್ಥ್ಯ ಯೋಜನೆಯಲ್ಲಿ ಒಳಪಡಿಸಲಾಗುವ ಸ್ವಾಸ್ಥ್ಯ ಆರೈಕೆಯ ವೆಚ್ಚಗಳ ಪ್ರಕಾರ ಮತ್ತು ಮೊತ್ತವನ್ನು ಮುಂಚಿತವಾಗಿ ನಿರ್ದಿಷ್ಟ ಪಡಿಸಲಾಗುತ್ತದೆ.

ಸ್ವಾಸ್ಥ್ಯ ವಿಮೆಯು ಏಕೆ ಮುಖ್ಯವಾಗಿದೆ?

ನಮ್ಮ ಆವಶ್ಯಕತೆಗಳಂತೆ ನಾವೆಲ್ಲರೂ ಮತ್ತು ನಮ್ಮ ಕುಟುಂಬದ ಎಲ್ಲರ ಸಲುವಾಗಿಯೂ ಸ್ವಾಸ್ಥ್ಯ ವಿಮೆಯನ್ನು ಖರೀದಿಸಬೇಕು. ಸ್ವಾಸ್ಥ್ಯ ವಿಮೆಯನ್ನು ಖರೀದಿಸುವುದು ಆಸ್ಪತ್ರೆಗೆ ದಾಖಲಿಸ್ಪಡುವ ತಕ್ಷಣದ ಅನಿರೀಕ್ಷಿತ ವೆಚ್ಚಗಳಿಂದ (ಅಥವಾ ಕ್ರಿಟಿಕಲ್ ಇಲ್‌ನೆಸ್ ನಂತಹ ಇತರ ಒಳಗೊಂಡಿರುವ ಆರೋಗ್ಯ ಪ್ರಕರಣಗಳು) ನಿಮ್ಮನ್ನು ಸಂರಕ್ಷಿಸುತ್ತಿದ್ದು ಹಾಗಿಲ್ಲದಿದ್ದರೆ ಅದು ಮನೆತನದ ಉಳಿತಾಯದ ಮೇಲೆ ಅಗಾಧ ಪರಿಣಾಮಕ್ಕೆ ಅಥವಾ ಸಾಲ ಮಾಡುವುದಕ್ಕೆ ಕಾರಣವಾಗಬಹುದು.

ನಮ್ಮಲ್ಲಿ ಪ್ರತಿಯೊಬ್ಬರೂ ಅನೇಕ ಸ್ವಾಸ್ಥ್ಯ ಅಪಾಯಗಳಿಗೆ ಒಡ್ಡಲ್ಪಡುತ್ತೇವೆ ಮತ್ತು ಯಾವುದೇ ಎಚ್ಚರಿಕೆ ಇಲ್ಲದೆ ವೈದ್ಯಕೀಯ ತುರ್ತು ಯಾರ ಮೇಲೂ ಬರಬಹುದು. ತಾಂತ್ರಿಕ ಪ್ರಗತಿ, ಹೊಸ ಕಾರ್ಯವಿಧಿಗಳು ಮತ್ತು ಹೆಚ್ಚು ಪರಿಣಾಮಕಾರಿ ಔಷಧಗಳಿಂದಾಗಿ ಸ್ವಾಸ್ಥ್ಯ ಆರೈಕೆಯು ಹೆಚ್ಚು ಹೆಚ್ಚು ದುಬಾರಿಯಾಗುತ್ತಿದೆ. ಅತ್ಯಧಿಕವಾದ ಈ ಚಿಕಿತ್ಸಾ ವೆಚ್ಚಗಳು ಅನೇಕರ ಕೈಗೆಟಕದಿರುವಾಗ, ಸ್ವಾಸ್ಥ್ಯ ವಿಮೆಯ ಸುರಕ್ಷೆಯನ್ನು ಪಡೆಯುವುದು ಕೈಗೆಟಕುವಂತಿರುತ್ತದೆ.

ಯಾವ ಪ್ರಕಾರಗಳ ಸ್ವಾಸ್ಥ್ಯ ವಿಮಾ ಯೋಜನೆಗಳು ಉಪಲಬ್ಧ ಇದೆ?

ಸ್ವಾಸ್ಥ್ಯ ವಿಮಾ ಪಾಲಿಸಿಗಳು ಮೈಕ್ರೋ ವಿಮಾ ಪಾಲಿಸಿಗಳಲ್ಲಿ ರೂ. 5000ರ ವಿಮಾ ಮೊತ್ತದಿಂದ ನಿರ್ದಿಷ್ಟವಾದ ಕೆಲವು ಕ್ರಿಟಿಕಲ್ ಇಲ್‌ನೆಸ್ ಯೋಜನೆಗಳಲ್ಲಿ ರೂ. 50 ಲಕ್ಷ ಅಥವಾ ಅದಕ್ಕಿಂತಲೂ ಅಧಿಕ ವಿಮಾ ಮೊತ್ತದಲ್ಲಿ ಉಪಲಬ್ಧವಿದೆ. ಹೆಚ್ಚಿನ ಇನ್‌ಶೂರರು 1 ಲಕ್ಷ ದಿಂದ 5 ಲಕ್ಷ ವಿಮಾ ಮೊತ್ತದ ನಡುವಿನ ಪಾಲಿಸಿಗಳನ್ನು ನೀಡುತ್ತಾರೆ. ಇನ್‌ಶೂರರು ಪಾವತಿಸಬೇಕಾದ ರೂಮ್ ಬಾಡಿಗೆಗಳು ಮತ್ತು ಇತರ ವೆಚ್ಚಗಳು ಆಯ್ಕೆ ಮಾಡಲಾದ ವಿಮಾ ಮೊತ್ತಕ್ಕೆ ಹೆಚ್ಚಾಗಿ ಜೋಡಿಸಲ್ಪಟ್ಟಿರುವುದರಿಂದ ಮುಖ್ಯತ: ದಾವೆ ಉಂಟಾದ ನಂತರ ವಿಮಾ ಮೊತ್ತವನ್ನು ಹೆಚ್ಚಿಸುವುದು ಸುಲಭವಾಗಿರದಿರಬಹುದಾದ ಕಾರಣ ತರುಣ ವಯಸ್ಸಿ ನಿಂದಲೇ ಸಾಕಷ್ಟು ಸುರಕ್ಷೆ ಪಡೆಯುವುದು ಉತ್ತಮ. ಅಲ್ಲದೆ ಹೆಚ್ಚಿನ ನಾನ್ ಲೈಫ್ ಇನ್‌ಶೂರೆನ್ಸ್ ಕಂಪೆನಿಗಳು ಒಂದು ವರ್ಷದ ಸಲುವಾಗಿ ಸ್ವಾಸ್ಥ್ಯ ವಿಮಾ ಪಾಲಿಸಿಗಳನ್ನು ನೀಡುತ್ತಿದ್ದರೂ, ಎರಡು, ಮೂರು ನಾಲ್ಕು ಅಥವಾ ಐದು ವರ್ಷಗಳ ಕಾಲಾವಧಿಗಾಗಿಯೂ ನೀಡಲಾಗುವ ಪಾಲಿಸಿಗಳಿವೆ. ಲೈಫ್ ಇನ್‌ಶೂರೆನ್ಸ್ ಕಂಪೆನಿಗಳು ದೀರ್ಘಕಾಲದ ತನಕ ವಿಸ್ತರಿಸುವ ಯೋಜನೆಗಳನ್ನು ಹೊಂದಿರಬಹುದು.

ಹಾಸ್ಪಿಟಲೈಸೇಶನ್ ಪಾಲಿಸಿಯು ಪಾಲಿಸಿ ಕಾಲಾವಧಿಯಲ್ಲಿ ಆಸ್ಪತ್ರೆಯ ದಾಖಲಾತಿಗಳ ಚಿಕಿತ್ಸೆಯ ಪೂರ್ಣ ಅಥವಾ ಭಾಗಶ: ವಾಸ್ತವಿಕ ವೆಚ್ಚಗಳನ್ನು ಒಳಗೊಂಡಿರಬಹುದು. ಇದು ಕೆಲವು ನಿರ್ದಿಷ್ಟ ಅವಧಿಗಾಗಿ ಆಸ್ಪತ್ರೆಗೆ ಸೇರಿ

ಸಲ್ಪಡುವ ಮೊದಲು ಮತ್ತು ನಂತರ ಆಸ್ಪತ್ರೆಯಲ್ಲಿನ ಬೇರೆ ಬೇರೆ ವೆಚ್ಚಗಳಿಗೆ ಅನ್ವಯಿಸುವ ವಿಶಾಲ ಪ್ರಕಾರದ ಸುರಕ್ಷೆಗಳಿಗೆ ಅನ್ವಯಿಸುತ್ತವೆ. ಇಂತಹ ಪಾಲಿಸಿಗಳು ವ್ಯಕ್ತಿಗತ ವಿಮಾ ಮೊತ್ತದ ಆಧಾರದಲ್ಲಿ ಅಥವಾ ಫ್ಯಾಮಿಲಿ ಫ್ಲೋಟರ್ ಆಧಾರದಲ್ಲಿ ಉಪಲಬ್ಧವಿರಬಹುದಾಗಿದ್ದು ಇದರಲ್ಲಿ ವಿಮಾ ಮೊತ್ತವು ಕುಟುಂಬದ ಸದಸ್ಯರಿಗೆ ಹಂಚಿಕೊಂಡಿರುತ್ತದೆ.

ಇನ್ನೊಂದು ಪ್ರಕಾರದ ಉತ್ಪನ್ನ ವಾಗಿರುವ **ಹಾಸ್ಪಿಟಲ್ ಡೈಲಿ ಕ್ಯಾಶ್ ಜೆನಿಫಿಟ್ ಪಾಲಿಸಿಯು** ಆಸ್ಪತ್ರೆಯಲ್ಲಿರುವ ಪ್ರತಿದಿನಕ್ಕೆ ದೈನಂದಿನ ಸ್ಥಿರ ವಿಮಾ ಮೊತ್ತವನ್ನು ಒದಗಿಸುತ್ತದೆ. ಐಸಿಯುನಲ್ಲಿ ದಾಖಲಿಸಲ್ಪಟ್ಟರೆ ಅಥವಾ ನಿರ್ದಿಷ್ಠ ಪಡಿಸಲಾದ ಅಸೌಖ್ಯತೆ ಅಥವಾ ಆರೋಗ್ಯ ಹಾನಿಗಳಿಗಾಗಿ ಅಧಿಕ ದೈನಂದಿನ ಲಾಭದ ಸುರಕ್ಷೆಯೂ ಇರಬಹುದು.

ಕ್ರಿಟಿಕಲ್ ಇಲ್‌ನೆಸ್ ಬೆನಿಫಿಟ್ ಪಾಲಿಸಿಯು ನಿರ್ದಿಷ್ಟ ಪಡಿಸಲಾದ ಕಾಯಿಲೆಯು ಪತ್ತೆ ಹಚ್ಚಲ್ಪಟ್ಟರೆ ಅಥವಾ ನಿರ್ದಿಷ್ಟಪಡಿಸಲಾದ ಕಾರ್ಯವಿಧಿಯನ್ನು ಮಾಡಿಸಿ ಕೊಂಡಲ್ಲಿ ವಿಮೆ ಮಾಡಿಸಿ ಕೊಂಡವರಿಗೆ ಒಂದು ಸ್ಥಿರ ಏಕಗಂಟಿನ ಮೊತ್ತವನ್ನು ಒದಗಿಸುತ್ತದೆ. ಇದು ಕ್ರಿಟಿಕಲ್ ಇಲ್‌ನೆಸ್‌ನ ಪರಿಣಾಮತ: ಉಂಟಾಗುವ ಬೇರೆ ಬೇರೆ ಪ್ರತ್ಯಕ್ಷ ಮತ್ತು ಪರೋಕ್ಷ ಆರ್ಥಿಕ ಅಡಚಣೆಗಳನ್ನು ಕಡಿಮೆ ಮಾಡಲು ಸಹಾಯಕವಾಗುತ್ತದೆ. ಸಾಮಾನ್ಯವಾಗಿ, ಏಕಗಂಟಿನ ಮೊತ್ತವನ್ನು ಒಮ್ಮೆ ಪಾವತಿಸಿದ ನಂತರ ಯೋಜನೆಯು ಊರ್ಜಿತವಾಗಿರುವುದಿಲ್ಲ.

ನಿರ್ದಿಷ್ಟ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿ ಕೊಂಡಲ್ಲಿ (**ಸರ್ಜಿಕಲ್ ಕ್ಯಾಶ್ ಬೆನಿಫಿಟ್**) ಏಕ ಗಂಟಿನ ಮೊತ್ತವನ್ನು ನೀಡುವ ಮತ್ತು ಹಿರಿಯ ನಾಗರಿಕರು ಮುಂತಾದ ನಿರ್ದಿಷ್ಠ ಲಕ್ಷಿತ ಜನರ ಆವಶ್ಯಕತೆಗೆ ತಕ್ಕಂತಹ ಇತರ ಪ್ರಕಾರಗಳ ಉತ್ಪನ್ನಗಳೂ ಇವೆ.

ನಗದು ರಹಿತ ಸೌಲಭ್ಯ ವೆಂದರೇನು?

ವಿಮಾ ಕಂಪೆಇನಿಗಳು ಅವರ ನೆಟ್‌ವರ್ಕ್‌ನ ಭಾಗವಾಗಿ ರಾಷ್ಟ್ರದಾದ್ಯಂತ ಅನೇಕ ಆಸ್ಪತ್ರೆಗಳೊಂದಿಗೆ ಟೈ-ಅಪ್ ವ್ಯವಸ್ಥೆಗಳನ್ನು ಹೊಂದಿವೆ. ನಗದು ರಹಿತ ಸೌಲಭ್ಯವನ್ನು ಒದಗಿಸುವ ಸ್ವಾಸ್ಥ್ಯ ವಿಮಾ ಪಾಲಿಸಿಯಡಿಯಲ್ಲಿ, ಓರ್ವ ಪಾಲಿಸಿ

ಧಾರಕರು ನೆಟ್‌ವರ್ಕ್‌ನಲ್ಲಿನ ಯಾವುದೇ ಆಸ್ಪತ್ರೆಯಲ್ಲಿ ಆಸ್ಪತ್ರೆಯ ಬಿಲ್‌ಗಳನ್ನು ಪಾವತಿಸದೇನೇ ಚಿಕಿತ್ಸೆಯನ್ನು ಪಡೆಯಬಹುದಾಗಿದ್ದು ಇದರಲ್ಲಿ ಆಸ್ಪತ್ರೆಗೆ ಹಣ ಪಾವತಿಯನ್ನು ವಿಮಾ ಕಂಪೆನಿಯ ಪರವಾಗಿ ಮೂರನೇ ಪಾರ್ಟಿ ಅಡ್ಮಿನಿಸ್ಟ್ರೇಟರರು ಪಾವತಿಸುತ್ತಾರೆ. ಆದರೆ ವಿಮಾ ಪಾಲಿಸಿಯಲ್ಲಿ ಅನುವು ಮಾಡಿದ ಮಿತಿ ಅಥವಾ ಉಪಮಿತಿಯ ಆಚೆಗಿನ ವೆಚ್ಚಗಳನ್ನು, ಪಾಲಿಸಿಯಡಿಯಲ್ಲಿ ಒಳಗೊಂಡಿರದ ವೆಚ್ಚಗಳನ್ನು ನೀವೇ ಆಸ್ಪತ್ರೆಗೆ ನೇರವಾಗಿ ತೀರಿಸಬೇಕು.

ಆದರೆ ನೀವು ನೆಟ್‌ವರ್ಕ್‌ನಲ್ಲಿಲ್ಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೆ ನಗದು ರಹಿತ ಸೌಲಭ್ಯವು ಉಪಲಬ್ಧವಿರುವುದಿಲ್ಲ.

ನಾನು ಸ್ವಾಸ್ಥ್ಯ ವಿಮೆಯನ್ನು ಆಯ್ಕೆ ಮಾಡಿದರೆ ನಾನು ಪಡೆಯುವ. ಕರಲಾಭ ಗಳಾವುವು?

ಸ್ವಾಸ್ಥ್ಯ ವಿಮೆಯು ಹೆಚ್ಚುವರಿ ಪ್ರೋತ್ಸಾಹಕವಾಗಿ ಆಕರ್ಷಕ ಕರಲಾಭಗಳೊಂದಿಗೆ ಬರುತ್ತಿದೆ. ಆದಾಯ ಕರ ಕಾಯ್ದೆಯಲ್ಲಿ ಒಂದು ವಿಶೇಷ ಸೆಕ್ಷನ್ ಇದ್ದು ಇದು ಸೆಕ್ಷನ್ 80 ಡಿ ಆಗಿದ್ದು ಸ್ವಾಸ್ಥ್ಯ ಆರೋಗ್ಯಕ್ಕಾಗಿ ಕರ ಲಾಭಗಳನ್ನು ಒದಗಿಸುತ್ತಿದ್ದು, ಆ ಸೆಕ್ಷನ್ 80ಸಿ ಜೀವ ವಿಮೆಗೆ ವ್ಯತಿರಿಕ್ತವಾಗಿ ಇದರಲ್ಲಿ ಇತರ ಪ್ರಕಾರದ ವಿನಿಯೋಜನೆಗಳು/ವೆಚ್ಚಗಳು ಕೂಡಾ ಕಡಿತಕ್ಕೆ ಅರ್ಹವಾಗಿವೆ.

ಸದ್ಯಕ್ಕೆ ನಗದಿನ ಹೊರತಾಗಿ ಯಾವುದೇ ವಿಧಾನದ ಪಾವತಿಯಿಂದ ಖರೀದಿಸಿದ ಪಾಲಿಸಿಗಾಗಿ ಖರೀದಿಸಿದವರು ತನ್ನ ಪತಿ/ಪತ್ನಿ ಮತ್ತು ಅವಲಂಬಿತ ಮಕ್ಕಳ ಸಲುವಾಗಿ ಸ್ವಾಸ್ಥ್ಯ ವಿಮಾ ಪ್ರೀಮಿಯಂ ಗಾಗಿ ಅವರ ಕರಾರ್ಹ ಆದಾಯದಿಂದ ರೂ. 15,000/-ರ ವಾರ್ಷಿಕ ಕಡಿತವನ್ನು ಪಡೆಯಬಹುದು. ಹಿರಿಯ ನಾಗರಿಕರಿಗೆ ಕಡಿತವು ಅಧಿಕವಿದೆ ಮತ್ತು ಅದು ರೂ. 20,000 ಆಗಿರುತ್ತದೆ.

ಅಲ್ಲದೆ, ವಿತ್ತ ವರ್ಷ 2008 - 2009 ರಿಂದ ಮಾತಾಪಿತರ ಸ್ವಾ ಸ್ಥ್ಯ ವಿಮೆಯ ಪ್ರೀಮಿಯಂನ ಸಲುವಾಗಿ ಕಡಿತಕ್ಕಾಗಿ ಹೆಚ್ಚುವರಿ ರೂ. 15,000/- ಉಪಲಬ್ಧ ವಿದ್ದು ಇದು ಮಾತಾಪಿತರು ಹಿರಿಯ ನಾಗರಿಕಾರಗಿದ್ದರೆ ಪುನ: ರೂ. 20,000/- ಆಗಿರತ್ತುದೆ.

ಪ್ರ : ಸ್ವಾಸ್ಥ್ಯ ವಿಮಾ ಪ್ರೀಮಿಯಂನ ಮೇಲೆ ಪರಿಣಾಮ ಬೀರುವ ಅಂಶಗಳಾವುವು?

ಉ: ವಯಸ್ಸು ಪ್ರೀಮಿಯಂನ್ನು ನಿರ್ಧರಿಸುವ ಮುಖ್ಯ ಅಂಶವಾಗಿದೆ, ನಿಮ್ಮ ವಯಸ್ಸು ಅಧಿಕವಿದ್ದಷ್ಟು ನೀವು ಅಸೌಖ್ಯತೆಗೆ ಹೆಚ್ಚು ಒಳಗಾಗಬಹುದಾದುದರಿಂದ ನಿಮ್ಮ ಪ್ರೀಮಿಯಂ ವೆಚ್ಚವೂ ಅಧಿಕವಿರುತ್ತದೆ. ಹಿಂದಿನ ವೈದ್ಯಕೀಯ ಹಿನ್ನೆಲೆಯು ಪ್ರೀಮಿಯಂ ಅನ್ನು ನಿರ್ಧರಿಸುವ ಇನ್ನೊಂದು ಮುಖ್ಯ ಅಂಶವಾಗಿದೆ. ಹಿಂದಿನ ವೈದ್ಯಕೀಯ ಹಿನ್ನೆಲೆಯು ಇರದಿದ್ದರೆ, ಪ್ರೀಮಿಯಂ ಸ್ವಯಂಚಾಲಿತವಾಗಿ ಕಡಿಮೆ ಇರುತ್ತದೆ. ದಾವೆ ಮುಕ್ತ ವರ್ಷಗಳೂ ಕೂಡಾ ಪ್ರೀಮಿಯಂನ ವೆಚ್ಚವನ್ನು ನಿರ್ಧರಿಸುವ ಅಂಶವಾಗಿರಬಹುದಾಗಿದೆ ಏಕೆಂದರೆ ನಿರ್ದಿಷ್ಟ ಪ್ರತಿಶತ ರಿಯಾಯಿತಿಯಿಂದ ನಿಮಗೆ ಲಾಭಕರವಾಗಬಹುದು. ಇದು ನಿಮ್ಮ ಪ್ರೀಮಿಯಂನ್ನು ಕಡಿಮೆ ಮಾಡಲು ನಿಮಗೆ ಸ್ವಯಂ ಚಾಲಿತವಾಗಿ ಸಹಾಯ ಮಾಡುತ್ತವೆ.

ಪ್ರ: ಸ್ವಾಸ್ಥ್ಯ ವಿಮಾ ಪಾಲಿಸಿಯಲ್ಲಿ ಏನು ಒಳಗೊಂಡಿರುವುದಿಲ್ಲ?

ಉ: ನೀವು ಪ್ರಾಸ್ಪೆಕ್ಟಸ್/ಪಾಲಿಸಿಯನ್ನು ಓದಲೇಬೇಕು ಮತ್ತು ಅದರಲ್ಲಿ ಏನು ಒಳಗೊಂಡಿಲ್ಲವೆಂದು ತಿಳಿದುಕೊಳ್ಳಬೇಕು. ಸಾಮಾನ್ಯವಾಗಿ ಮೊದಲೇ ಇರುವಂಥಾ ಕಾಯಿಲೆಗಳನ್ನು (ಮೊದಲೇ ಇರುವಂಥಾ ಕಾಯಿಲೆಯನ್ನು ಹೇಗೆ ವ್ಯಾಖ್ಯಾನಿಸಲಾಗಿದೆ ಎಂದು ತಿಳಿಯುವುದಕ್ಕಾಗಿ ಪಾಲಿಸಿಯನ್ನು ಓದಿರಿ) ಸ್ವಾಸ್ಥ್ಯ ಪಾಲಿಸಿಯಡಿಯಲ್ಲಿ ಹೊರತು ಪಡಿಸಲಾಗುತ್ತದೆ. ಅಲ್ಲದೆ, ಪಾಲಿಸಿಯು ಸಾಮಾನ್ಯವಾಗಿ ಮೊದಲನೇ ವರ್ಷದಿಂದಲೇ ನಿರ್ದಿಷ್ಟವಾದ ಕೆಲವು ಕಾಯಿಲೆಗಳನ್ನು ಹೊರತುಪಡಿಸುತ್ತದೆ ಮತ್ತು ಕಾಯುವ ಅವಧಿಯನ್ನು ಕೂಡಾ ವಿಧಿಸುತ್ತದೆ. ಅಲ್ಲದೆ ಕನ್ನಡಕ, ಕಾಂಟ್ಯಾಕ್ಟ್ ಲೆನ್ಸ್, ಶ್ರವಣ ಸಾಧನ ಮುಂತಾದ ಸ್ಟ್ಯಾಂಡರ್ಡ್ ವೆಚ್ಚಗಳನ್ನು ಹೊರತು ಪಡಿಸಲಾಗಿದೆ, ಒಳಗೊಂಡಿರದ ದಂತ ಚಿಕಿತ್ಸೆ ಶಸ್ತ್ರ ಚಿಕಿತ್ಸೆ (ಆಸ್ಪತ್ರೆಗೆ ದಾಖಲಿಸಲ್ಪಡದಿದ್ದರೆ), ಕನ್ವಲೆಸೆನ್ಸ್, ಸಾಮಾನ್ಯ ಅಶಕ್ತತೆ, ಕಂಜೆನಿಟಲ್ ಬಾಹ್ಯ ದೋಷಗಳು, ವೆನರಲ್ ರೋಗ, ಸ್ವತ: ಉದ್ದೇಶ ಪೂರ್ವಕ ಮಾಡಿಕೊಂಡ ಆರೋಗ್ಯ ಹಾನಿ, ಅಮಲು ಬರಿಸುವ ಔಷಧಗಳು/ಅಲ್ಕೋಹಾಲ್‌ನ ಉಪಯೋಗ ಏಡ್ಸ್ ರೋಗ ನಿದಾನದ

ವೆಚ್ಚಗಳು, ಎಕ್ಸ್-ರೇ ಅಥವಾ ಅಸ್ಪತ್ರೆಗೆ ದಾಖಲಿಸುವ ಅವಶ್ಯಕತೆ ಇಲ್ಲದ ಕಾಯಿಲೆಗೆ ಸಂಬಂಧಿಸಿದ ಪ್ರಯೋಗಶಾಲಾ ಪರೀಕ್ಷಣೆಗಳು, ಸಿಸೇರಿಯನ್ ಸೆಕ್ಷನನ್ನೊಳಗೊಂಡು ಗರ್ಭಧಾರಣೆ ಅಥವಾ ಹೆರಿಗೆಷೆ ಸಂಬಂಧಿಸಿದ ಚಿಕಿತ್ಸೆ, ನ್ಯಾಚುರೋಪಥಿ ಚಿಕಿತ್ಸೆ.

ಪ್ರ: ಪಾಲಿಸಿಯಡಿಯಲ್ಲಿ ದಾವೆಗಳಿಗೆ ಯಾವುದೇ ಕಾಯುವ ಅವಧಿ ಉಂಟೇ?

ಉ : ಹೌದು: ನೀವು ಹೊಸ ಪಾಲಿಸಿಯನ್ನು ಪಡೆದಾಗ, ಪಾಲಿಸಿ ಆರಂಭ ತಾರೀಖಿನಿಂದ ಸಾಮಾನ್ಯವಾಗಿ 30 ದಿನಗಳ ಕಾಯುವ ಅವಧಿ ಇದ್ದು, ಈ ಕಾಲಾವಧಿಯಲ್ಲಿ ಆಸ್ಪತ್ರೆ ದಾಖಲಾತಿಯ ಯಾವುದೇ ಶುಲ್ಕಗಳನ್ನು ವಿಮಾ ಕಂಪೆನಿಗಳು ಪಾವತಿಸುವುದಿಲ್ಲ. ಆದಾಗ್ಯೂ ಆದರೆ ಅಪಘಾತದ ಕಾರಣ ಉಂಟಾಗುವ ಯಾವುದೇ ತುರ್ತು ಆಸ್ಪತ್ರೆಗೆ ಸೇರಿಸುವಿಕೆಗೆ ಇದು ಅನ್ವಯಿಸುವುದಿಲ್ಲ. ಈ ಕಾಯುವ ಅವಧಿಯು ನವೀಕರಣದಡಿ ಇರುವ ನಂತರದ ಪಾಲಿಸಿಗಳಿಗೆ ಅನ್ವಯಿಸುವುದಿಲ್ಲ.

ಪ್ರ: ವಿಮಾ ಪಾಲಿಸಿಯಲ್ಲಿ ಮೊದಲೇ ಇರುವ ಪರಿಸ್ಥಿತಿ ಯಾವುದು?

ಉ : ಇದು ನೀವು ಸ್ವಾಸ್ಥ್ಯ ವಿಮಾ ಪಾಲಿಸಿಯನ್ನು ಪಡೆಯುವ ಮೊದಲು ಇದ್ದಂತಹ ವೈದ್ಯಕೀಯ ಪರಿಸ್ಥಿತಿ ಕಾಯಿಲೆಯಾಗಿದೆ ಮತ್ತು ವಿಮಾ ಕಂಪೆನಿಯು 1 ನೇ ಪಾಲಿಸಿಯ 48 ತಿಂಗಳೊಳಗೆ ಇಂತಹ ಮೊದಲೇ ಇರುವಂಥಾ ಪರಿಸ್ಥಿತಿಗಳನ್ನು ಒಳಪಡಿಸದಿರುವುದರಿಂದ ಇದು ಗಮನಿಸಬೇಕಾದುದಾಗಿದೆ. ಅಂದರೆ, ಇರುವಂಥಾ ಪರಿಸ್ಥಿತಿಗಳು ನಿರಂತರ ವಿಮಾ ಸುರಕ್ಷೆಯ 48 ತಿಂಗಳು ಪೂರ್ಣಗೊಂಡ ನಂತರವೇ ಹಣಪಾವತಿಗಾಗಿ ಪರಿಗಣಿಸಲ್ಪಡಬಹುದೆಂಥರ್ವಾಗಿದೆ.

ಪ್ರ: ಒಂದು ವೇಳೆ ಪಾಲಿಸಿಯನ್ನು ಮುಕ್ತಾಯ ತಾರೀಖಿನ ಮೊದಲು ಸರಿಯಾದ ಸಮಯದಲ್ಲಿ ನವೀಕರಿಸದಿದ್ದರೆ, ನನಗೆ ನವಿಕರಣವನ್ನು ನಿರಾಕರಿಸಲಾಗುವುದೇ?

ಉ: ನೀವು ಕೊನೆಗೊಳ್ಳುವ ತಾರೀಖಿನಿಂದ 15 ದಿನಗಳೊಳಗೆ (ಗ್ರೇಸ್ ಅವಧಿ ಎಂದು ಕರೆಯಲಾಗುತ್ತದೆ) ಪ್ರೀಮಿಯಂ ಸಂದಾಯ ಮಾಡಿದರೆ ನಿಮ್ಮ

ಪಾಲಿಸಿಯು ನವೀಕರಣಕ್ಕೆ ಅರ್ಹವಾಗುತ್ತದೆ. ಆದ್‌ರೆ ವಿಮಾ ಕಂಪೆನಿಯು ಪ್ರೀಮಿಯಂನ್ನು ಪಡೆಯದೆ ಇರುವ ಅವಧಿಗಾಗಿ ಸುರಕ್ಷೆಯು ಲಭ್ಯವಿರುವುದಿಲ್ಲ. ಗ್ರೇಸ್ ಅವಧಿಯೊಳಗೆ ಪ್ರೀಮಿಯಂನ್ನು ಸಂದಾಯ ಮಾಡದಿದ್ದರೆ ಪಾಲಿಸಿಯು ರದ್ದಾಗುತ್ತದೆ.

ಪ್ರ : ನಾನು ನವೀಕರಣ ಲಾಭಗಳನ್ನು ಕಳೆದುಕೊಳ್ಳದೆ ನನ್ನ ಪಾಲಿಸಿಯನ್ನು ಒಂದು ವಿಮಾ ಕಂಪೆನಿಯಿಂದ ಇನ್ನೊಂದಕ್ಕೆ ವರ್ಗಾಯಿಸಬಹುದೇ?

ಉ: ಹೌದು. ಇನ್‌ಶೂರೆನ್ಸ್ ರೆಗ್ಯುಲೇಟರಿ ಮತ್ತು ಡೆವಲಪ್‌ಮೆಂಟ್ ಅಥಾರಿಟಿಯು (ಐಆರ್‌ಡಿಎ) 1 ನೇ ಜುಲ್ಯಾ 2011 ರಿಂದ ಜಾರಿಯಾಗುವಂತೆ ಮಾಡುವ ಸುತ್ತೋಲೆಯನ್ನು ಕಳುಹಿಸಿದ್ದು ಇದು ವಿಮೆ ಮಾಡಿಸಿಕೊಂಡವರು ಮೊದಲೇ ಇರುವಂಥಾ ಪರಿಸ್ಥಿತಿಗಳಿಗೆ, ಹಿಂದಿನ ಪಾಲಿಸಿಯಲ್ಲಿ ಪಡೆದಿರುವಂಥಾ ನವೀಕರಣ ಕ್ರೆಡಿಟ್‌ಗಳನ್ನು ಕಳೆದುಕೊಳ್ಳದೆ ಒಂದು ವಿಮಾ ಕಂಪೆನಿಯಿಂದ ಮತ್ತು ಒಂದು ಯೋಜನೆಯಿಂದ ಇನ್ನೊಂದಕ್ಕೆ ಪೋರ್ಟೇಬಿಲಿಟಿಯನ್ನು ಅನುವು ಮಾಡುವಂತೆ ವಿಮಾ ಕಂಪೆನಿಗಳಿಗೆ ನಿರ್ದೇಶಿಸುತ್ತದೆ. ಆದರೆ ಈ ಕ್ರೆಡಿಟ್ ಹಿಂದಿನ ಪಾಲಿಸಿಯಡಿಯಲ್ಲಿನ ವಿಮಾ ಮೊತ್ತಕ್ಕೆ (ಬೋನಸ್‌ನ್ನು ಒಳಗೊಂಡು) ಸೀಮಿತವಾಗಿದೆ. ವಿವರಗಳಿಗಾಗಿ, ವಿಮಾ ಕಂಪೆನಿಯಿಂದ ಪರಿಶೀಲಿಸಿಕೊಳ್ಳಬಹುದು.

ಪ್ರ: ದಾವೆಯನ್ನು ಸಲ್ಲಿಸಿದ ನಂತರ ಪಾಲಿಸಿ ಕವರೇಜ್‌ಗೆ ಏನಾಗುತ್ತದೆ?

ಉ : ದಾವೆಯನ್ನು ಸಲ್ಲಿಸಿ ಮತ್ತು ಅದನ್ನು ತೀರಿಸಿದ ನಂತರ, ತೀರಿಕೆಯಲ್ಲಿ ಪಾವತಿಸಲಾದ ಮೊತ್ತ ದಷ್ಟು ಪಾಲಿಸಿ ಸುರಕ್ಷೆಯನ್ನು ಕಡಿಮೆ ಮಾಡಲಾಗುತ್ತದೆ. ಉದಾಹರಣೆಗಾಗಿ ಜನವರಿಯಲ್ಲಿ ಆ ವರ್ಷಕ್ಕಾಗಿ ರೂ. 5 ಲಕ್ಷದ ಕವರೇಜ್ ಇರುವ ಪಾಲಿಸಿಯನ್ನು ನೀವು ಆರಂಭಿಸಿದ್ದೀರಿ. ಎಪ್ರಿಲ್‌ನಲ್ಲಿ ನೀವು ರೂ. 2 ಲಕ್ಷದ ದಾವೆಯನ್ನು ಮಾಡುತ್ತೀರಿ. ಮೇಯಿಂದ ಡಿಸೆಂಬರ್ ತನಕ ನಿಮಗೆ ಉಪಲಬ್ಧವಿರುವ ಸುರಕ್ಷೆಯು ಬಾಕಿ ರೂ. 3 ಲಕ್ಷವಾಗಿದೆ.

ಪ್ರ: ಯಾವುದೇ ಒಂದು ಅಸೌಖ್ಯತೆ ಎಂದರೇನು?

ಉ : ''ಯಾವುದೇ ಒಂದು ಅಸೌಖ್ಯತೆ'' ಎಂದರೆ ಪಾಲಿಸಿಯಲ್ಲಿ ನಿರ್ದಿಷ್ಟ

ಪಡಿಸಿದ ನಿರ್ದಿಷ್ಟ ಸಂಖ್ಯೆಯ ದಿನಗಳೊಳಗಿನ ಮರುಕಳಿಕೆಯನ್ನೊಳಗೊಂಡು ಅಸೌಖ್ಯತೆಯ ನಿರಂತರ ಅವಧಿಯಾಗಿದೆ. ಇದು ಸಾಮಾನ್ಯವಾಗಿ 45 ದಿನಗಳಾಗಿರುತ್ತದೆ.

ಪ್ರ: ಒಂದು ವರ್ಷದಲ್ಲಿ ಅನುವು ಮಾಡುವ ದಾವೆಗಳ ಗರಿಷ್ಠ ಸಂಖ್ಯೆ ಎಷ್ಟಿರುತ್ತದೆ?

ಯಾವುದೇ ಪಾಲಿಸಿಯಲ್ಲಿ ಮಿತಿ ಹೇರಿರದಿದ್ದರೆ ಪಾಲಿಸಿಯ ಅವಧಿಯಲ್ಲಿ ಯಾವುದೇ ಸಂಖ್ಯೆಯ ದಾವೆಗಳಿಗೆ ಅನುವು ಮಾಡಲಾಗುತ್ತದೆ. ಆದರೆ ಪಾಲಿಸಿಯಡಿಯಲ್ಲಿ ವಿಮಾ ಮೊತ್ತವು ಗರಿಷ್ಠ ಮಿತಿಯಾಗಿದೆ.

ಪ್ರ: ''ಸ್ವಾಸ್ಥ್ಯ ತಪಾಸಣೆ'' ಸೌಲಭ್ಯ ಎಂದರೇನು?

ಉ : ಕೆಲವು ಸ್ವಾಸ್ಥ್ಯ ವಿಮಾ ಪಾಲಿಸಿಗಳು ಕೆಲವು ವರ್ಷಗಳಿಗೊಮ್ಮೆ ಸಾಮಾನ್ಯ ಸ್ವಾಸ್ಥ್ಯ ತಪಾಪಣೆಗಾಗಿ ನಿರ್ದಿಷ್ಟವಾದ ವೆಚ್ಚಗಳನ್ನು ಪಾವತಿಸುತ್ತದೆ. ಇದು ಸಾಮಾನ್ಯವಾಗಿ ನಾಲ್ಕು ವರ್ಷಗಳಿಗೊಮ್ಮೆ ಲಭ್ಯವಿರುತ್ತದೆ.

ಪ್ರ: ಫ್ಯಾಮಿಲಿ ಫ್ಲೋಟರ್ ಪಾಲಿಸಿಯ ಅರ್ಥವೇನು?

ಉ : ಫ್ಯಾಮಿಲಿ ಫ್ಲೋಟರ್ ಎಂದರೆ ನಿಮ್ಮ ಇಡೀ ಕುಟುಂಬದ ಆಸ್ಪತ್ರೆಗೆ ದಾಖಲಾತಿಯ ವೆಚ್ಚಗಳ ಕಾಳಜಿವಹಿಸುವ ಒಂದೇ ಪಾಲಿಸಿಯಾಗಿದೆ. ಪಾಲಿಸಿಯು ಒಂದು ವಿಮಾ ಮೊತ್ತವನ್ನು ಹೊಂದಿದ್ದು ಇದನ್ನು ಒಟ್ಟಿನಲ್ಲಿ ಪಾಲಿಸಿ ವಿಮಾ ಮೊತ್ತದ ಗರಿಷ್ಠ ಮಿತಿಗೆ ಒಳಪಟ್ಟು ವಿಮೆ ಮಾಡಿಸಿ ಕೊಂಡಿರುವ ಯಾವನೇ ಎಲ್ಲಾ ವ್ಯಕ್ತಿಗಳೂ ಯಾವುದೇ ದಾಮಾಶಯದಲ್ಲಿ ಅಥವಾ ಮೊತ್ತದಲ್ಲಿ ಉಪಯೋಗಿಸಬಹುದು. ಸಾಮಾನ್ಯವಾಗಿ ಪ್ರತ್ಯೇಕ ವೈಯಕ್ತಿಕ ಪಾಲಿಸಿಗಳನ್ನು ಖರೀದಿಸುವುದಕ್ಕಿಂತ ಫ್ಯಾಮಿಲಿ ಫ್ಲೋಟರ್ ಯೋಜನೆಗಳನ್ನು ಖರೀದಿಸುವುದು ಅತ್ಯುತ್ತಮವಾಗಿದೆ. ಫ್ಯಾಮಿಲಿ ಫ್ಲೋಟರ್ ಪ್ಲಾನ್‌ಗಳು ಒಮ್ಮೆಲೇ ಕಾಯಿಲೆ, ಶಸ್ತ್ರಚಿಕಿತ್ಸೆ ಮತ್ತು ಅಪಘಾತಗಳ ಕಾಲಾವಧಿಯಲ್ಲಿ ಎಲ್ಲಾ ವೈದ್ಯಕೀಯ ವೆಚ್ಚಗಳ ಕಾಳಜಿವಹಿಸುತ್ತದೆ.

ಪಾಲಿಸಿಧಾರಕರಿಗೆ ಸೇವೆ ಸಲ್ಲಿಸಲು ಐಆರ್‌ಡಿಎ ಇವರಿಂದ ನಿಗದಿಗೊಳಿಸಲಾದ ತಗಲುವ ಸಮಯ

ಸೇವೆ	ಗರಿಷ್ಠ ಸಮಯ
ಸಾಮಾನ್ಯ	
ಪ್ರಸ್ತಾವವನ್ನು ಪ್ರೊಸೆಸ್ ಮಾಡುವುದು ಆವಶ್ಯಕತೆ/ಪಾಲಿಸಿ ನೀಡಿಕೆ/ರದ್ದು ಪಡಿಸುವಿಕೆ ಯನ್ನೊಳನೊಂಡು ನಿರ್ಧಾರವನ್ನು ತಿಳಿಸುವುದು	15 ದಿನಗಳು
ಪ್ರಸ್ತಾವದ ಪ್ರತಿಯನ್ನು ಪಡೆದುಕೊಳ್ಳುವುದು	30 ದಿನಗಳು
ಪಾಲಿಸಿ ನೀಡಿದ ನಂತರದ ಸೇವೆ - ದೋಷ ಪ್ರಸ್ತಾವದ ಡಿಪಾಸಿಟ್‌ನ ಹಿಂತಿರುಗಿಸುವಿಕೆಯ ಬಗ್ಗೆ ಕೋರಿಕೆಗಳು ಮತ್ತು ನಾನ್-ಕ್ಲೈಮ್ ಸಂಬಂಧಿತ ಸೇವೆಗಳ ಕೋರಿಕೆಗಳು	10 ದಿನಗಳು
ಜೀವ ವಿಮೆ	
ಸರಂಡರ್ ಮೌಲ್ಯ/ಆ್ಯನುಯಿಟಿ/ಪೆನ್ಶನ್ ಪ್ರೊಸೆಸ್ ಮಾಡುವುದು.	10 ದಿನಗಳು
ಪರಿಪಕ್ವತೆಯ ಕ್ಲೈಮ್/ಸರ್ವೈವಲ್ ಲಾಭ ಪೆನಲ್ ಬಡ್ಡಿ ಪಾವತಿಸದಿರುದಂಥಾದ್ದು	15 ದಿನಗಳು
ಕ್ಲೈಮ್‌ನ್ನು ಸಲ್ಲಿಸಿದ ನಂತರ ಕ್ಲೈಮ್‌ನ ಆವಶ್ಯಕತೆಗಳನ್ನು ತಿಳಿಸುವುದು	15 ದಿನಗಳು
ತನಿಖೆಯ ಆವಶ್ಯಕತೆ ಇಲ್ಲದೆ ಮೃತ್ಯು ದಾವೆಗಳ ತೀರಿಕೆ	30 ದಿನಗಳು
ತನಿಖೆಯ ಆವಶ್ಯಕತೆಯೊಂದಿಗೆ ಮೃತ್ಯು ದಾವೆಯ ತೀರಣೆ/ನಿರಾಕರಕೆ	6 ತಿಂಗಳು
ಸಾಮಾನ್ಯ ವಿಮೆ	
ಸರ್ವೆ ರಿಪೊರ್ಟ್ ಸಲ್ಲಿಕೆ	30 ದಿನಗಳು
ಇನ್‌ಶೂರರು ಸೇರಿಕೆ ವರದಿಯನ್ನು ಕೋರುವುದು.	15 ದಿನಗಳು
ಮೊದಲ/ಸೇರಿಕೆ ಸರ್ವೇ ರಿಪೋರ್ಟ್‌ನ್ನು ಪಡೆದ ನಂತರ ದಾವೆಯ ತೀರಿಕೆ / ತಿರಸ್ಕರಿಸುವಿಕೆ	30 ದಿನಗಳು
ದೂರುಗಳು	
ದೂರಗಳ ಸ್ವೀಕೃತಿಯ ದಾಖಲಾತಿ	3 ದಿನಗಳು
ದೂರಿನ ನಿವಾರಣೆ	15 ದಿನಗಳು

5. ನಿಮ್ಮಲ್ಲಿ ದೂರುಗಳಿದ್ದರೆ

ಕನ್‌ಸ್ಯೂಮರ್ ಅಫೇರ್ಸ್ ಡಿಪಾರ್ಟ್ ಮೆಂಟ್ ಆಫ್ ಇನ್ ಶೂರೆನ್ಸ್ ರೆಗ್ಯುಲೇಟರಿ ಆಂಡ್ ಡೆವಲಪ್‌ಮೆಂಟ್ ಅಥಾರಿಟಿ (ಐಆರ್‌ಡಿಎ) ಇವರು ಸಮಗ್ರ ದೂರು ನಿರ್ವಹಣಾ ವ್ಯವಸ್ಥೆಯನ್ನು (ಐಜಿಎಮ್‌ಎಸ್) ಪರಿಚಯಿಸಿದ್ದು ಇದು ದೂರುಗಳ ನೋಂದಾವಣೆ ಮತ್ತು ಅದರ ತಾಜಾ ಸ್ಥಿತಿಯನ್ನು ತಿಳಿಯುವ ಒಂದು ಆನ್‌ಲೈನ್ ವ್ಯವಸ್ಥೆಯಾಗಿದೆ. ನೀವು ಮೊದಲಿಗೆ ನಿಮ್ಮ ದೂರನ್ನು ವಿಮಾ ಕಂಪೆನಿಯಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅದರ ನಿವಾರಣೆಯಿಂದ ನೀವು ತೃಪ್ತರಾಗದಿದ್ದರೆ ನೀವು ಅದನ್ನು www.igms.irda.gov.in ಇದನ್ನು ತಲಪುವ ಮೂಲಕ ಐಜಿಎಮ್‌ಎಸ್‌ನ ಮೂಲಕ ಐಆರ್‌ಡಿಎಗೆ ಕಳಹಿಸಬಹುದು. ನಿಮಗೆ ನೇರವಾಗಿ ಇನ್‌ಶೂರರ ದೂರು ವ್ಯವಸ್ಥೆಯನ್ನು ತಲಪಲು ಸಾಧ್ಯವಾಗದಿದ್ದರೆ, ಐಜಿಎಮ್‌ಎಸ್ ಇವರು ನಿಮ್ಮ ದೂರನ್ನು ವಿಮಾ ಕಂಪೆನಿಯಲ್ಲಿ ನೋಂದಾಯಿಸಿಕೊಳ್ಳುವ ಪರ್ಯಾಯ ವ್ಯವಸ್ಥೆಯನ್ನು ಮಾಡುತ್ತಾರೆ.

ಐಜಿಎಮ್‌ಎಸ್‌ನ ಮೂಲಕ ನಿಮ್ಮ ದೂರನ್ನು ದಾಖಲಿಸುವುದು ಮಾತ್ರವಲ್ಲದೆ (ಅಂದರೆ ವೆಬ್) ದೂರುಗಳನ್ನು ದಾಖಲಿಸಲು ನಿಮಗೆ ಅನೇಕ ಮಾಧ್ಯಮಗಳಿವೆ- ಇ - ಮೈಲ್‌ನ ಮೂಲಕ (complaints@irda.gov.in) ಪತ್ರದ ಮೂಲಕ (ನಿಮ್ಮ ಪತ್ರಗಳನ್ನು ಕನ್‌ಸ್ಯೂವರ್ ಅಫೇರ್ಸ್ ಡಿಪಾರ್ಟ್‌ಮೆಂಟ್, ಇನ್‌ಶೂರೆನ್ಸ್ ರೆಗ್ಯುಲೇಟರಿ ಆಂಡ್ ಡೆವಲಪ್‌ಮೆಂಟ್ ಅಥಾರಿಟಿ, 3 ನೇ ಮಹಡಿ, ಪರಿಶ್ರಮ್ ಭವನ, ಬಶೀರ್‌ಭಾಗ್, ಹೈದರಾಬಾದ್ : 4 ಇಲ್ಲಿಗೆ ಕಳುಹಿಸಿರಿ) **ಅಥವಾ ನಿ:ಶುಲ್ಕ ನಂ :** 155255 ಈ ನಿ:ಶುಲ್ಕ ನಂಬರ್‌ನಲ್ಲಿ ಐಆರ್‌ಡಿಎ ಕಾಲ್ ಸೆಂಟರ್‌ಗೆ ಕರೆ ಮಾಡಿರಿ, ಇದರ ಮೂಲಕ

ಐಆರ್‌ಡಿಎ ಉಚಿತವಾಗಿ ನಿಮ್ಮ ದೂರುಗಳನ್ನು ವಿಮಾ ಕಂಪೆನಿಗಳ ವಿರುದ್ಧ ನೋಂದಾಯಿಸಿಕೊಳ್ಳುತ್ತದೆ ಹಾಗೂ ಅದರ ಸ್ಥಿತಿಯನ್ನು ತಿಳಿದು ಕೊಳ್ಳಲು ಸಹಾಯ ಮಾಡುತ್ತದೆ. ಕಾಲ್ ಸೆಂಟರ್ ಕರೆಯ ಆಧಾರದಲ್ಲಿ ದೂರು ಫಾರ್ಮ್‌ನ್ನು ತುಂಬಿಸಲು ಸಹಾಯ ಮಾಡುತ್ತದೆ ಆವಶ್ಯಕವಾದಾಗಲೆಲ್ಲ ಅದು ವಿಮಾ ಕಂಪೆನಿಯ ವಿಳಾಸ, ಟೆಲಿಫೋನ್ ಕ್ರಮಾಂಕ, ವೆಬ್‌ಸೈಟ್ ವಿವರಗಳು , ಸಂಪರ್ಕ ನಂಬರ್, ಇ-ಮೈಲ್ ಇವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವ ಮೂಲಕ ನೇರವಾಗಿ ಮೊದಲಿಗೆ ದೂರುಗಳನ್ನು ಸಲ್ಲಿಸುವ ಸೌಲಭ್ಯವನ್ನು ಒದಗಿಸುತ್ತದೆ. ಐಆರ್‌ಡಿಎ ಕಾಲ್‌ಸೆಂಟರ್ ಸೋಮವಾರದಿಂದ ಶನಿವಾರದ ತನಕ ಬೆಳಿಗ್ಗೆ ಗಂಟೆ 8 ರಿಂದ ರಾತ್ರಿ ಗಂಟೆ 8 ರ ತನಕ ಹಿಂದಿ, ಇಂಗ್ಲಿಷ್ ಮತ್ತು ವಿವಿಧ ಭಾರತೀಯ ಭಾಷೆಗಳಲ್ಲಿ 12 ತಾಸು X 6 ದಿನಗಳು ಸೇವಾ ವೇದಿಕೆಯ ಮೂಲಕ ವಾಸ್ತವಿಕ ಪರ್ಯಾಯ ಮಾಧ್ಯಮವನ್ನು ಪ್ರಸ್ತಾವಿತರಿಗೆ ಮತ್ತು ಪಾಲಿಸಿಧಾರಕರಿಗೆ ಸಮಗ್ರ ಕಾರ್ಯ ಸೌಲಭ್ಯವನ್ನು ಒದಗಿಸುತ್ತದೆ.

ಐಆರ್‌ಡಿಎಯಲ್ಲಿ ಒಂದು ದೂರನ್ನು ದಾಖಲಿಸಿದಾಗ, ಅದು ವಿಮಾ ಕಂಪೆನಿಯೊಂದಿಗೆ ಅದರ ನಿವಾರಣೆಗಾಗಿ ಪ್ರಯತ್ನಿಸುತ್ತದೆ. ದೂರನ್ನು ನಿವಾರಿಸಲು ಕಂಪೆನಿಗೆ 15 ದಿನಗಳನ್ನು ನೀಡಲಾಗುತ್ತದೆ. ಅವಶ್ಯಕ ಎಂದಾದರೆ, ಐಆರ್‌ಡಿಎಯು ತನಿಖೆಗಳನ್ನು ಮತ್ತು ವಿಚಾರಣೆಗಳನ್ನು ಮಾಡುತ್ತದೆ. ಅಲ್ಲದೆ, ಅನ್ವಯವಾಗುವಲ್ಲೆಲ್ಲಾ, ರಿಡ್ರೆಸ್ಸಲ್ ಆಫ್ ಪಬ್ಲಿಕ್ ಗ್ರಿವೆನ್ಸಸ್ ರೂಲ್ಸ್ 1998 ರ ಪ್ರಕಾರ ದೂರು ನೀಡಿದವರನ್ನು ವಿಮಾ ಒಂಬುಡ್ಸ್‌ಮೆನ್‌ರನ್ನು ಸಂಪರ್ಕಿಸಲು ಸಲಹೆ ನೀಡುತ್ತದೆ.

ಅನಂಗೀಕಾರ:

ಈ ಕೈಪಿಡಿಯು ನಿಮಗೆ ಸಾಮಾನ್ಯ ಮಾಹಿತಿಯನ್ನು ಮಾತ್ರ ನೀಡುವ ಉದ್ದೇಶವನ್ನು ಹೊಂದಿದೆ ಮತ್ತು ಇದು ಎಲ್ಲವನ್ನೂ ಒಳಗೊಂಡಿಲ್ಲ. ಇದೊಂದು ಶೈಕ್ಷಣಿಕ ಉಪಕ್ರಮವಾಗಿದೆ ಮತ್ತು ಯಾವುದೇ ಕಾನೂನು ಸಲಹೆಯನ್ನು ನೀಡುವ ಉದ್ದೇಶವನ್ನು ಹೊಂದಿಲ್ಲ.